## ಗಾಂಜಾ: ಪುರುಷತ್ವ ನಷ್ಟ

ಗಾಂಜಾ ಸೇವನೆ ಪುರುಷರಲ್ಲಿ ವೀರ್ಯ ಪ್ರಮಾಣವನ್ನು ಕುಗ್ಗಿಸುವ ಜೊತೆಗೆ ವಂಶವಾಹಿಯ ಮೇಲೆ ಹಾನಿಯನ್ನು ಉಂಟು ಮಾಡುತ್ತದೆ ಎಂದು ಸಂಶೋಧಕರ ಅಧ್ಯಯನ ಹೇಳಿದೆ.

ಅನೇಕ ಕಡೆಗಳಲ್ಲಿ ಗಾಂಜಾ ಬಳಕೆ ಸಹಜವಾಗುತ್ತಿದೆ. ಕಾನೂನಿನ ಕಣ್ಣಿನಿಂದ ತಪ್ಪಿಸಿ ಮಾಡುವ ಈ ಚಟದಿಂದ ಆರೋಗ್ಯ ಹಾಳಾಗುತ್ತದೆ. ಮದ್ಯ, ತಂಬಾಕು ಹಾಗೂ ಮಾದಕ ದ್ರವ್ಯ ಯಾವುದೇ ರೂಪದಲ್ಲಿ ತೆಗೆದುಕೊಂಡರೂ ಅಪಾಯ ತಪ್ಪಿದ್ದಲ್ಲ. ನಿತ್ಯ ಗಾಂಜಾವನ್ನು ಬಳಸುವುದು ಕೂಡ ಅದೇ ಪ್ರಮಾಣದ ಹಾನಿಯನ್ನು ಉಂಟುಮಾಡುತ್ತದೆ. ಕ್ರಮೇಣ ಅದು ವ್ಯಕ್ತಿಯ ವೀರ್ಯ ನಾಶ ಮಾಡುವುದಷ್ಟೇ ಅಲ್ಲ, ಆತನ ಜೀವನ ಉತ್ಸಾಹವನ್ನೂ ಕುಗ್ಗಿಸುತ್ತದೆ ಎಂದು ತಜ್ಞರು ಹೇಳಿದ್ದಾರೆ.

ಸಂಶೋಧಕರು 24 ಮಂದಿಯನ್ನು ತಮ್ಮ ಅಧ್ಯಯನಕ್ಕೆ ಒಳಪಡಿಸಿದ್ದರು. ಗಾಂಜಾದ ದಮ್ಮು ಎಳೆಯುವವರ ಮೂತ್ರದಲ್ಲಿ ಟೆಟ್ರಾಹೈಡ್ರೊಕ್ಯಾನಾಬಿನೋಲ್ (THC) ಎಂಬ ರಾಸಾಯನಿಕ ಇರುವುದು ಪತ್ತೆಯಾಗಿದೆ. ಜೊತೆಗೆ ವೀರ್ಯಾಣು ಪ್ರಮಾಣವೂ ಕಡಿಮೆಯಾಗಿದೆ. ಇದರಿಂದ ಅವರ ವಂಶವಾಹಿ ತಂತುಗಳ ಮೇಲೆ ಹಾನಿ ಉಂಟಾಗುತ್ತದೆ. ಕೆಲವೊಮ್ಮೆ ಕ್ಯಾನ್ಸರ್ ಬೆಳವಣಿಗೆಗೂ ಕಾರಣ ಆಗಬಹುದು ಎಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

## ತಾಯಿ ಹೃದಯ ದುರ್ಬಲ

ಗರ್ಭಧರಿಸುವ ಮಹಿಳೆಗೆ ಹೃದಯ ತೊಂದರೆ ಉಂಟಾಗುವ ಸಾಧ್ಯತೆ ಹೆಚ್ಚಿದೆ ಎಂದು ಅಧ್ಯಯನ ಹೇಳಿದೆ.

ತಾಯ್ತನ ಅನುಭವಿಸುವವರಿಗೆ ಶೇ. 14ರಷ್ಟು ಹೃದಯ ಕಾಯಿಲೆ ಬರುವ ಸಾಧ್ಯತೆ ಇದೆ. ಮುಂದೆ ಅವರಿಗೆ ಪಾರ್ಶ್ವವಾಯು ಕಾಡಬಹುದು. ಗರ್ಭಾವಸ್ಥೆಯಲ್ಲಿ ಹೊಟ್ಟೆಯ ಭಾಗದಲ್ಲಿ ಕೊಬ್ಬು ಹೆಚ್ಚಾಗುತ್ತದೆ. ಮಾತ್ರವಲ್ಲದೆ ಹೃದಯಕ್ಕೆ ಆ ಸಮಯದಲ್ಲಿ ಕೆಲಸ ಹೊರೆಯಾಗುತ್ತದೆ. ಇದರಿಂದ ಹೃದಯ ಕಾಯಿಲೆ ಬರುವ ಅಪಾಯ ಹೆಚ್ಚಾಗುತ್ತದೆ ಎಂದು ತಜ್ಞರು ಹೇಳಿದ್ದಾರೆ.

ಮಹಿಳೆ ಪ್ರತಿಗರ್ಭಧಾರಣೆಯ ಸಂದರ್ಭದಲ್ಲೂ ಆಕೆಯ ಹೃದಯ ದುರ್ಬಲಗೊಳ್ಳುತ್ತದೆ. ವರ್ಷಗಳು ಉರುಳಿದಂತೆ ಅದೇ ಆಕೆಗೆ ಪಾರ್ಶ್ವವಾಯುವಿಗೂ ಕಾರಣವಾಗಬಹುದು. ಅದರಲ್ಲೂ ಧೂಮಪಾನ ಮಾಡುವವರು, ಚಟುವಟಿಕೆಯಿಂದ ಇಲ್ಲದೆ ಇರುವುದು, ಶಿಸ್ತುಬದ್ಧವಲ್ಲದ ಆಹಾರ ಪದ್ಧತಿ ಹಾಗೂ ದೇಹದ ತೂಕದಲ್ಲಿ ನಿಯಂತ್ರಣವನ್ನು ಕಾಪಾಡದಿದ್ದ ಪಕ್ಷದಲ್ಲಿ ಹೃದಯ ಸಮಸ್ಯೆಗಳು ಇನ್ನೂ ಹೆಚ್ಚಾಗುವ ಅಪಾಯ ಇದೆ ಎನ್ನುವುದು ಸಂಶೋಧಕರ ಅಭಿಮತ.

## ಲಿವರ್ ಕಾಪಾಡುವ ತರಕಾರಿ

ನಿತ್ಯವೂ ಹಸಿರು ಸೊಪ್ಪು ಮತ್ತು ತರಕಾರಿಗಳನ್ನು ಸೇವಿಸುವ ಅಭ್ಯಾಸವನ್ನು ಇಟ್ಟುಕೊಂಡಿದ್ದರೆ ಕೊಬ್ಬಿನಿಂದ ಉಂಟಾಗುವ ಯಕೃತ್ತು (ಲಿವರ್) ರೋಗವನ್ನು ತಡೆಯಬಹುದು ಎಂದು ಸಂಶೋಧಕರ ಅಧ್ಯಯನ ಅಭಿಪ್ರಾಯಪಟ್ಟಿದೆ.

ಅಧಿಕ ತೂಕ ಮತ್ತು ಮಿತಿಮೀರಿ ಮದ್ಯ ಸೇವಿಸುವುದರಿಂದ ಯಕೃತ್ ಸಂಬಂಧಿತ ಕಾಯಿಲೆ ಕಾಡುವುದು ಸಹಜ. ಸೊಪ್ಪು ಮತ್ತು ತರಕಾರಿಯನ್ನು ನಮ್ಮ ಆಹಾರದ ಭಾಗವನ್ನಾಗಿ ಮಾಡಿಕೊಂಡರೆ ಆ ಅಪಾಯವನ್ನು ಹಿಮ್ಮೆಟ್ಟಬಹುದು ಎನ್ನುವುದು ಸಂಶೋಧಕರ ಸಲಹೆ.

ತರಕಾರಿ ಮತ್ತು ಹಣ್ಣುಹಂಪಲು ಸೇವನೆಯಿಂದ ಆರೋಗ್ಯವೂ ವೃದ್ಧಿಯಾಗುತ್ತದೆ. ಮುಂದೆ ಇದು ಮಧುಮೇಹ ಇಲ್ಲವೆ ಅಧಿಕ ರಕ್ತದೊತ್ತಡ ಸಮಸ್ಯೆಯನ್ನೂ ನಿಯಂತ್ರಣದಲ್ಲಿ ಇಡಲು ಸಹಾಯ ಮಾಡುತ್ತದೆ ಎನ್ನುವುದು ಸಂಶೋಧಕರ ಪ್ರತಿಪಾದನೆ.

■ ಟಿಪ್ಸ್


ಸರ್ವೇಜನಃ ಸುಖಿನೋ ಭವಂತು:

ಸಮಸ್ಯೆ ನಿಮ್ಮದು ಪರಿಹಾರ ನಮ್ಮದು

ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ

ವಶೀಕರಣ ಮಾಂತ್ರಿಕರು

ಶ್ರೀಯುತ ಪರಶುರಾಮ್ ಗುರೂಜಿ



ಶ್ರೀ ಸಾಯಿಬಾಬ ಉಪಾಸಕರು

ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ

ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ

ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.

ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು. ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:

ಜೈಬಾಲಾಜಿ ಜ್ಯೋತಿಷ್ಯಂ 9620444460

ಖಾಯಂ ಮನೆ ವಿಳಾಸ: ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.

ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.